**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 667 |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 21.02.2024. |
| ಉತ್ತರಿಸುವ ಸಚಿವರು | : | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಯಾವ ಯಾವ ಕಾರ್ಯ ಕ್ರಮಗಳನ್ನು ರೂಪಿಸಲಾಗಿದೆ; (ವಿವರ ನೀಡುವುದು) | ವಿಜಯಪುರ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ರೂಪಿಸಿರುವ ಕಾರ್ಯಕ್ರಮಗಳು ಹಾಗೂ ಸದರಿ ಕಾರ್ಯಕ್ರಮಗಳಿಗೆ ವೆಚ್ಚ ಮಾಡಿರುವ ಅನುದಾನ ವಿವರ ಈ ಕೆಳಕಂಡಂತಿದೆ. (ರೂ. ಲಕ್ಷಗಳಲ್ಲಿ) |
| ಆ) | ಇಲ್ಲಿವರೆಗೂ ಆ ಕಾರ್ಯಕ್ರಮಗಳಿಗೆ ಎಷ್ಟು ಅನುದಾನವನ್ನು ವೆಚ್ಚ ಮಾಡಲಾಗಿದೆ; (ವಿವರ ನೀಡುವುದು) | (ಕೆಳಗಿನ ಕೋಷ್ಟಕ) |

| ಕ್ರ. ಸಂ | ಯೋಜನೆಯ ಹೆಸರು | ವೆಚ್ಚ ಮಾಡಿದ ಅನುದಾನ |
|---|---|---|
| 1 | ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ | 43.75 |
| 2 | ಎಂ.ಫಿಲ್ ಮತ್ತು ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ | 0.00 |
| 3 | ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ | 127.20 |
| 4 | ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಮತ್ತು ಕಲಿಕೆ ಸಾಧನಗಳು | 2.50 |
| 5 | ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ | 15.65 |
| 6 | ಅಲ್ಪಸಂಖ್ಯಾತರಿಗಾಗಿ ಕಾನೂನು ಪದವೀಧರರಿಗೆ ತರಬೇತಿ ಭತ್ಯೆ | 6.68 |
| 7 | ಮದರಸಾದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು | 25.00 |
| 8 | ಮೌಲಾನಾ ಆಜಾದ್ ಶಾಲೆಗಳ ನಿರ್ವಹಣೆ | 33.19 |
| 9 | ಅಲ್ಪಸಂಖ್ಯಾತರ ವಸತಿ ಶಾಲೆಗಳು | 643.42 |
| 10 | ಅಲ್ಪಸಂಖ್ಯಾತರಿಗಾಗಿ ಹಾಸ್ಟಲ್‌ಗಳು | 312.53 |
| 11 | ಅಲ್ಪಸಂಖ್ಯಾತರಿಗಾಗಿ ಅನಾಥಾಲಯ | 4.76 |
| 12 | ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ | 6.25 |
| 13 | ಜೈನ್, ಬೌದ್ಧ ಮತ್ತು ಸಿಖ್ ಸಮುದಾಯದ ಅಭಿವೃದ್ಧಿ | 25.00 |
| 14 | ಶಾದಿಮಹಲ್ ಕಟ್ಟಡ ನಿರ್ಮಾಣ | 415.25 |
| 15 | 11 ಕಾರ್ಪೊರೇಷನ್‌ಗಳಲ್ಲಿ ಅಲ್ಪಸಂಖ್ಯಾತರ ಸ್ಲಂ/ಕಾಲೋನಿ ಅಭಿವೃದ್ಧಿ ಯೋಜನೆ | 3.96 |
| 16 | ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆ | 0.99 |
| 17 | ಅಲ್ಪಸಂಖ್ಯಾತರಿಗಾಗಿ ವಸತಿ ನಿಲಯ ಮತ್ತು ವಸತಿ ಶಾಲೆಗಳ ಕಟ್ಟಡ ನಿರ್ಮಾಣ | 125.00 |
| 18 | ಅರಿವು ವಿದ್ಯಾಭ್ಯಾಸ ಸಾಲ ಯೋಜನೆ | 31.50 |
| 19 | ವಕ್ಫ್ ಆಸ್ತಿಗಳ ಸಂರಕ್ಷಣೆ ಯೋಜನೆ | 175.00 |
| | ಒಟ್ಟು | 1997.63 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ಎಷ್ಟು ಜನ ಫಲಾನುಭವಿಗಳು ಇದರ ಲಾಭಗಳನ್ನು ಪಡೆದುಕೊಂಡಿರುತ್ತಾರೆ? (ತಾಲ್ಲೂಕುವಾರು ವಿವರ ನೀಡುವುದು) | ವಿಜಯಪುರ ಜಿಲ್ಲೆಯಲ್ಲಿ 5586 ಫಲಾನುಭವಿಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯ ಯೋಜನೆಗಳ ಲಾಭಗಳನ್ನು ಪಡೆದುಕೊಂಡಿದ್ದು, ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |

**ಸಂಖ್ಯೆ: MWD 37 LMQ 2024**

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ

# ಅಲ್ಪಸಂಖ್ಯಾತರ ನಿರ್ದೇಶನಾಲಯ

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪ್ರಕಾಶ ಕೆ ರಾಥೋಡ್ (ನಾಮ ನಿರ್ದೇಶನ) ಇವರ ಚುಕ್ಕೆ ಗುರುತಿಲ್ಲದ ಪ್ರ.ಸಂ 668 (667)ಕ್ಕೆ ಅನುಬಂಧ-01**

ವರ್ಷ2023–24

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ | ಮದರಸಾಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು | ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಮತ್ತು ಕಲಿಕೆ ಸಾಧನಗಳು | ಅಲ್ಪಸಂಖ್ಯಾತರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ | ಎಂ.ಫಿಲ್/ ಪಿ.ಹೆಚ್.ಡಿ ಫೆಲೋಶಿಪ್ | ಜೈನ್, ಬೌದ್ಧ ಮತ್ತು ಸಿಖ್ ಸಮುದಾಯದ ಅಭಿವೃದ್ಧಿ | ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ | 11 ಕಾರ್ಪೋರೇಷನ್‌ಗಳಲ್ಲಿ ಅಲ್ಪಸಂಖ್ಯಾತರ ಸ್ಲಮ್/ಕಾಲೋನಿ ಅಭಿವೃದ್ಧಿ ಯೋಜನೆ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | ವಿಜಯಪುರ | ವಿಜಯಪುರ | 0 | 1 | 0 | 15 | **6** | 1 | 848 | 1 |
| 2 | | ಇಂಡಿ | 0 | 1 | 0 | 12 | 0 | 0 | | 0 |
| 3 | | ಸಿಂದಗಿ | 1 | 1 | 0 | 3 | 0 | 0 | | 1 |
| 4 | | ಬ.ಬಾಗೇವಾಡಿ | 0 | 1 | 0 | 13 | 0 | 0 | | 0 |
| 5 | | ಮುದ್ದೇಬಿಹಾಳ | 0 | 1 | 1 | 7 | 0 | 0 | | 1 |
| **ಒಟ್ಟು** | | | **1** | **5** | **1** | **50** | **6** | **1** | **848** | **3** |

**ವರ್ಷ2023–24**

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆ | ಅಲ್ಪಸಂಖ್ಯಾತರಗಾಗಿ ಕಾನೂನು ಪದವೀಧರರಿಗೆ ತರಬೇತಿ ಭತ್ಯೆ | ಅಲ್ಪಸಂಖ್ಯಾತ ರಿಗಾಗಿ ಅನಾಥಾಲಯ | ಡಿ.ಎಡ್ ಮತ್ತು ಬಿ.ಎಡ್ ಪ್ರೋತ್ಸಾಹಧನ | ಶಾದಿಮಹಲ್ ನಿರ್ಮಾಣ | ವಿದ್ಯಾರ್ಥಿನಿಲಯಗಳ ನಿರ್ವಹಣೆ | ವಸತಿ ಶಾಲೆ/ ಕಾಲೇಜುಗಳ ನಿರ್ವಹಣೆ | ಮೌಲಾನಾ ಆಜಾದ್ ಶಾಲೆಗಳ ನಿರ್ವಹಣೆ | ಅಲ್ಪಸಂಖ್ಯಾತರಿಗಾಗಿ ವಸತಿ ನಿಲಯ ಮತ್ತು ವಸತಿ ಶಾಲೆ ಕಟ್ಟಡಗಳ ನಿರ್ಮಾಣ |
|---|---|---|---|---|---|---|---|---|---|---|---|
| 1 | 2 | 3 | 12 | 13 | 14 | 15 | 16 | 17 | 18 | 19 | 20 |
| 1 | ವಿಜಯಪುರ | ವಿಜಯಪುರ | 1 | 13 | 1 | 84 | 6 | 450 | 800 | 600 | 1 |
| 2 | | ಇಂಡಿ | 0 | 0 | 0 | 24 | 1 | 125 | 660 | 0 | 0 |
| 3 | | ಸಿಂದಗಿ | 1 | 0 | 1 | 26 | 3 | 75 | 250 | 251 | 0 |
| 4 | | ಬ.ಬಾಗೇವಾಡಿ | 0 | 0 | 0 | 21 | 0 | 100 | 0 | 163 | 0 |
| 5 | | ಮುದ್ದೇಬಿಹಾಳ | 1 | 0 | 0 | 20 | 2 | 125 | 600 | 200 | 1 |
| **ಒಟ್ಟು** | | | **3** | **0** | **0** | **175** | **0** | **875** | **2310** | **1214** | **2** |

**ನಿರ್ದೇಶಕರು**
**ಅಲ್ಪಸಂಖ್ಯಾತರ ನಿರ್ದೇಶನಾಲಯ**
**ಬೆಂಗಳೂರು**

| ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ | | | |
|---|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.. ಪ್ರಕಾಶ್ ಕೆ ರಾಥೋಡ್ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 668 (667) (ರೂ.ಲಕ್ಷಗಳಲ್ಲಿ) | | | |
| ಕ್ರ ಸಂ | ವಿಧಾನಸಭಾ ಮತಕ್ಷೇತ್ರ | ವೆಚ್ಚ ಮಾಡಿದ ಅನುದಾನ | ಲಾಭ ಪಡೆದ ಫಲಾನುಭವಿಗಳ ಸಂಖ್ಯೆ |
| 1 | ವಿಜಯಪುರ ನಗರ | 25 | 50 |
| 2 | ಮುದ್ದೇಬಿಹಾಳ | 2 | 4 |
| 3 | ದೇವರ ಹಿಪ್ಪರಗಿ | 3.5 | 7 |
| 4 | ನಾಗಠಾಣ | 1 | 2 |
| ಒಟ್ಟು | | **31.5** | **63** |

MANAGING DIRECTOR
KARNATAKA MINORITIES DEVELOPMENT
CORPORATION LIMITED
BENGALURU

**2023-24 ನೇ ಸಾಲಿಗೆ ನಿಗಮದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಯೋಜನೆಗಳು**

1. 'ಅರಿವು' (ವಿಧ್ಯಾಭ್ಯಾಸ ಸಾಲ)ಸಾಲ ಯೋಜನೆ
2. ಸ್ವಾವಲಂಬಿ ಸಾರಥಿ ಯೋಜನೆ
3. 'ಶ್ರಮಶಕ್ತಿ' ಯೋಜನೆ
4. ಶ್ರಮಶಕ್ತಿ (ವಿಶೇಷ ಮಹಿಳಾ ಯೋಜನೆ)
5. ಗಂಗಾ ಕಲ್ಯಾಣ ಯೋಜನೆ
6. ವಿದೇಶಿ ವಿಧ್ಯಾಭ್ಯಾಸ ಸಾಲ ಯೋಜನೆ
7. ಸಮುದಾಯ ಆಧಾರಿತ ತರಬೇತಿ ಯೋಜನೆ
8. ವೃತ್ತಿ ಪ್ರೋತ್ಸಾಹ ಯೋಜನೆ
9. ಸಾಂತ್ವನ ಯೋಜನೆ

1. **ಅರಿವು(ವಿಧ್ಯಾಭ್ಯಾಸ ಸಾಲ) ಯೋಜನೆ**

ಈ ಯೋಜನೆಯಡಿಯಲ್ಲಿ ವೃತ್ತಿಪರ ಶಿಕ್ಷಣ ಅಂದರೆ MBBS, MD, MS, BE, B. Tech, M.E, M.Tech, BDS, MDS, B.Ayush, M.Ayush, MBA, MCA, LLB, B.Arch, M.Arch ಕೋರ್ಸ್ ಮಾಡಬಯಸುವ ಅಲ್ಪಸಂಖ್ಯಾತ ವಿಧ್ಯಾರ್ಥಿಗಳಿಗೆ ಅವರು ವ್ಯಾಸಂಗ ಪೂರ್ಣಗೊಳಿಸುವವರಿಗೆ ಪ್ರತಿ ವರ್ಷಕ್ಕೆ ರೂ.50,000/-ದಿಂದ ರೂ.5,00,000/- ವರೆಗೆ ಸಾಳವನ್ನು ಮಂಜೂರು ಮಾಡಲಾಗುತ್ತದೆ.ವ್ಯಾಸಂಗ ಪೂರ್ಣಗೊಳಿಸಿದ 6 ತಿಂಗಳ ನಂತರ ಅಂತಹ ವಿಧ್ಯಾರ್ಥಿಯ ಶೇ.2ರ ಸೇವಾಶುಲ್ಕದೊಂದಿಗೆ ಸಾಲವನ್ನು ಮರುಪಾವತಿ ಮಾಡಬೇಕಾಗುತ್ತದೆ.ಈ ಯೋಜನೆಯಡಿ ಕುಟುಂಬದ ವಾರ್ಷಿಕ ಆದಾಯಮಿತಿ ರೂ.8.00 ಲಕ್ಷಗಳು ಮೀರಿರಬಾರದು.

**ಮಾರ್ಗಸೂಚಿಗಳು**:

1. ವಿಧ್ಯಾರ್ಥಿಯು ರಾಜ್ಯದ ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರಬೇಕು.
2. ವಿಧ್ಯಾರ್ಥಿಯು ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
3. ವಿಧ್ಯಾರ್ಥಿಯ ವಾರ್ಷಿಕ ಆದಾಯ ರೂ.8.00 ಲಕ್ಷ ಮೀರಿರಬಾರದು.

4. ವಿದ್ಯಾಭ್ಯಾಸ ಸಾಲವನ್ನು ಪಡೆಯ ಬಯಸುವ ವಿಧ್ಯಾರ್ಥಿಗಳು ಅರ್ಜಿಗಳನ್ನು ಆನ್ಲೈನ್ ಮೂಲಕ ಸಲ್ಲಿಸಬೇಕು
5. ಆಯಾ ಜಿಲ್ಲಾ ಕಚೇರಿಗಳಲ್ಲಿ ಆನ್ಲೈನ್ ನಲ್ಲಿ ನವೀಕರಣ ಅರ್ಜಿಗಳನ್ನು ಸಲ್ಲಿಸುವಾಗ ಹಿಂದಿನ ವರ್ಷದಲ್ಲಿ ನಿಗಮವು ಬಿಡಗಡೆ ಮಾಡಿದ ಸಾಲದ 12 % ಮೊತ್ತವನ್ನು ವಿಧ್ಯಾರ್ಥಿಗಳು ಪಾವತಿಸಬಾಕಾಗುತ್ತದೆ.
6. ವಿಧ್ಯಾರ್ಥಿಯ ಕುರಿತು ತಹಶೀಲ್ದಾರ್‌ರಿಂದ ಜಾತಿ/ಆದಾಯ ಪ್ರಾಮಾಣಿಕರಣವನ್ನು ಸಂಸ್ಥೆಗಳು/ಕಾಲೇಜುಗಳು ಖಚಿತಪಡಿಸಿಕೊಳ್ಳಬೇಕು.
7. ವಿಧ್ಯಾರ್ಥಿಗಳಿಗೆ ಸಾಲದ ಮೊತ್ತವನ್ನು ನಿಗಮದಿಂದ ನೇರವಾಗಿ ಡಿ.ಬಿಟಿ ಮೂಲಕ ಕಾಲೇಜಿನ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುತ್ತದೆ.
8. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ( ಸಿ.ಇ.ಟಿ/ನೀಟ್ ಆಯ್ಕೆಯಾದ MBBS,MD/MS ಕೋರ್ಸ್ ಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿಧ್ಯಾರ್ಥಿಗಳಿಗೆ ಗರಿಷ್ಠ ರೂ.5.00 ಲಕ್ಷದ ವರೆಗೆ ಸಾಲ ನೀಡಲಾಗುವುದು.
9. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ(ಸಿ.ಇ.ಟಿ/ನೀಟ್)ಆಯ್ಕೆಯಾದ BDS,MDS ಕೋರ್ಸ್ ಗಳಿಗೆ ಗರಿಷ್ಠ ರೂ.1.00 ಲಕ್ಷದವರೆಗೆ,ಹಾಗೂ B.AYUSH,M.AYUSH ಕೋರ್ಸ್ ಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿಧ್ಯಾರ್ಥಿಗಳಿಗೆ ಗರಿಷ್ಠ ರೂ.50.000 / -ಗಳು ಸಾಲವಾಗಿ ನೀಡಲಾಗುವುದು.
10. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (ಸಿ.ಇ.ಟಿ/ನೀಟ್) ಆಯ್ಕೆಯಾದ ಅಂದರೆ Bachelour of Architect/engineering/Technology(B.E/B.tech)M.tech ,M.E ,B-Arch, M.Arch, ಕೋರ್ಸ್ ಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿಧ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ ಗರಿಷ್ಠ ರೂ. 50.000/-ಗಳು ಸಾಲವಾಗಿ ನೀಡಲಾಗುವುದು.
11. ಅಲ್ಲದೆ MBA,MCA,LLB ಕೋರ್ಸ್ ಗಳಿಗೆ ಆಯ್ಕೆಯಾದ ವಿಧ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ ಗರಿಷ್ಠ ರೂ. 50.000/-ಗಳು ಸಾಲವಾಗಿ ನೀಡಲಾಗುವುದು

**ದಾಖಲೆಗಳು:**

1. ವಿಧ್ಯಾರ್ಥಿ ಆನ್ ಲೈನ್ ಅರ್ಜಿ ಸಲ್ಲಿಸಬೇಕು
2. ವಿಧ್ಯಾರ್ಥಿಯ ಇತ್ತಿಚಿನ 2 ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರ
3. ವಿಧ್ಯಾರ್ಥಿಯ ಜಾತಿ ಮತ್ತು ಆಧಾಯ ಪ್ರಮಾಣ ಪತ್ರ
4. ವಿಧ್ಯಾರ್ಥಿಯ ಅಧಾರ್ ಕಾರ್ಡ್ ಪ್ರತಿ
5. ವಿಧ್ಯಾರ್ಥಿಯ ಸಿ.ಇ.ಟಿ ಪ್ರವೇಶದ ಆದೇಶದ ಪತ್ರ
6. ವಿಧ್ಯಾರ್ಥಿಯ ನೀಟ್ ಪ್ರವೇಶದ ಆದೇಶದ ಪತ್ರ
7. ವಿಧ್ಯಾರ್ಥಿಯ ಎಸ್.ಎಸ್ .ಎಲ್ .ಸಿ/10 ನೇ ತರಗತಿಯ ಅಂಕಪಟ್ಟಿ
8. ವಿಧ್ಯಾರ್ಥಿಯ ಡಿಪ್ಲಮೋ /ಪಿ.ಯು.ಸಿ ಅಂಕಪಟ್ಟಿ
9. ಇಂಡಿಮ್ನಿಟಿ ( ನಷ್ಟ /ಪರಿಹಾರ) ಬಾಂಡ್
10. ವಿಧ್ಯಾರ್ಥಿಯ ಕಾಲೇಜ್ ಬ್ಯಾಂಕ್ ವಿವರ

11. ವಿಧ್ಯಾರ್ಥಿಯ ಬೋನಾಫೈಡ್/ಸ್ಟಡಿ ಸರ್ಟಿಫಿಕೇಟ್
12. ವಿಧ್ಯಾರ್ಥಿಯ ಸ್ವಯಂ ಘೋಷಣೆ ಪತ್ರ
13. ಪೋಷಕರ ಸ್ವಯಂ ಘೋಷಣೆ ಪತ್ರ
14. ಕಾಲೇಜ್ ಫೀ ಸ್ಟ್ರಕ್ಚರ್

## 2 ಸ್ವಾಲಂಬಿ ಸಾರಥಿ ಯೋಜನೆ:

ಈ ಯೋಜನೆಯನ್ನು ನಿಗಮದ ವತಿಯಿಂದ ರಾಷ್ಟ್ರೀಕೃತ/ಷೆಡ್ಯೂಲ್ ಬ್ಯಾಂಕ್‌ಗಳ ಆರ್.ಬಿ.ಐ ನಿಂದ ಮಾನ್ಯತೆ ಪಡೆದ ವಿವಿಧ ಫೈನಾನ್ಸ್ ಸಂಸ್ಥೆಗಳು (ಫೈನಾನ್ಸ್ ಕಂಪನೀಸ್ /ಕೊ-ಆಪರೇಟೀವ್ ಬ್ಯಾಂಕ್ / ಸೊಸೈಟೀಸ್)ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತದೆ.

ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ನೀಡಿದ /ಪಡೆದ ಫಲಾನುಭವಿಗಳಿಗೆ ಆಟೋ ರಿಕ್ಷಾ/ಗೂಡ್ಸ್ ವಾಹನ /ಟ್ಯಾಕ್ಸಿ ಖರೀದಿಸಲು ವಾಹನದ ಮೌಲ್ಯದ ಶೇ.50ರಷ್ಟು ಸಹಾಯಧನನ ಗರಿಷ್ಠ ರೂ. 3.00 ಲಕ್ಷವನ್ನು ನೀಡಲಾಗುವುದು.

**ಮಾರ್ಗಸೂಚಿಗಳು:**

1.ಅರ್ಜಿದಾರರು ರಾಜ್ಯದ ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರಬೇಕು
2. ಅರ್ಜಿದಾರರು ರಾಜ್ಯದ ಖಾಯಂ ನಿವಾಸಿಯಾಗಿರಬೇಕು
3. ಅರ್ಜಿದಾರರ ವಯೋಮಿತಿ 18 ರಿಂದ 55 ವರ್ಷಗಳು.
4.ಎಲ್ಲಾ ಮೂಲಗಳಿಂದ ಕೌಟುಂಬಿಕ ವಾರ್ಷಿಕ ಆದಾಯ ರೂ.6.00 ಲಕ್ಷದೊಳಗಿರಬೇಕು.
5. ಅರ್ಜಿದಾರರ ಕುಟುಂಬದ ಯಾವುದೇ ಸದಸ್ಯರು ರಾಜ್ಯ/ಕೇಂದ್ರ ಸರ್ಕಾರದ ಉದ್ಯೋಗಿ ಯಾಗಿರಬಾರದು
6. ಅರ್ಜಿದಾರರು RTO ಇಂದ ನೀಡಲ್ಪಟ್ಟ ಸಂಬಂದಪಟ್ಟ ವಾಹನ ಚಾಲನ ಪರವಾಗಿ ಯನ್ನು (license) ಹೊಂದಿರಬೇಕು.
7. ಅರ್ಜಿದಾರರ ಮತ್ತು ಕುಟುಂಬದ ಸದಸ್ಯರು ವಾಹನಕ್ಕೆ ಸಂಬಂದಪಟ್ಟಂತೆ ರಾಜ್ಯ ಸರ್ಕಾರದ ಯಾವುದೇ ಯೋಜನೆಯಡಿ ಸಾಲ ಸೌಲಭ್ಯ ಪಡೆದಿರಬಾರದು.
8.ಅರ್ಜಿದಾರರು ಕೆ.ಎಂ.ಡಿ.ಸಿ ಯಲ್ಲಿ ಸುಸ್ತಿದಾರರಾಗಿರಬಾರದು.
9. ಮಹಿಳೆಯರಿಗೆ ಆಧ್ಯತೆಯನ್ನು ನೀಡಲಾಗುವುದು.

10. ಈ ಯೋಜನೆಯಡಿ ಖರೀದಿಸಲಾಗಿರುವ ವಾಹನವನ್ನು ಫಲಾನುಭವಿಗಳು ಸಾಲದ ಅವಧಿಯಲ್ಲಿ ಇತರರಿಗೆ ಪರಬಾರೆ ಮಾಡಬಾರದು.

**ಸಲ್ಲಿಸ ಬೇಕಾದ ದಾಖಲೆಗಳು:**

1. ಆನ್‌ಲೈನ್ ಅರ್ಜಿ
2. ಫಲಾನುಭವಿಯ ಇತ್ತೀಚಿನ 2 ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರ
3. ಜಾತಿ ಮತ್ತು ಆಧಾಯ ಪ್ರಮಾಣ ಪತ್ರ
4. ಪಡಿತರ ಚೀಟಿ/ಮತದಾರರ ಚೀಟಿ /ಆಧಾರ್‌ಕಾರ್ಡ್ ಪ್ರತಿ
5. ವಾಹನ ಚಾಲನ ಪರವಾನಿಗೆ ಪ್ರಮಾಣ ಪತ್ರ
6. ಅರ್ಜಿದಾರರ ಮತ್ತು ಕುಟುಂಬದ ಸದಸ್ಯರು ವಾಹನ ಖರೀದಿಗೆ ರಾಜ್ಯ ಸರ್ಕಾರದ ಯಾವುದೇ ಯೋಜನೆಯಡಿ ಸಾಲ ಸೌಲಭ್ಯ ಪಡೆದಿಲ್ಲದಿರುವ ಬಗ್ಗೆ ಜಿಲ್ಲಾ ವ್ಯವಸ್ಥಾಪಕರಿಂದ ಧೃಡೀಕರಣ ಪತ್ರ (Affidavit)
7. ಈ ಯೋಜನೆಯಡಿ ಪಡೆದ ವಾಹನವನ್ನು ಯಾರಿಗೂ ಪರಬಾರೆ ಮಾಡದಿರುವ ಬಗ್ಗೆ ಧೃಡೀಕರಣ ಪತ್ರ (Affidavit)

**ಆಯ್ಕೆ ಸಮಿತಿ:**

1. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು -ಅಧ್ಯಕ್ಷರು
2. ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ-ಉಪಾಧ್ಯಕ್ಷರು
3. ಸಂಬಂಧಪಟ್ಟ ಜಿಲ್ಲೆಯ ಲೀಡ್ ಬ್ಯಾಂಕಿನ ವ್ಯವಸ್ಥಾಪಕರು-ಸದಸ್ಯರು
4. ಸಂಬಂಧಪಟ್ಟ ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿ- ಸದಸ್ಯರು
5. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅದಿಕಾರಿ,ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ-ಸದಸ್ಯರು
6. ಸಂಬಂಧಪಟ್ಟ ಜಿಲ್ಲೆಯ ಕ.ಅ.ಅ ನಿಗಮದ ಜಿಲ್ಲಾ ವ್ಯವಸ್ಥಾಪಕರು

**ಯೋಜನೆಯ ಅನುಷ್ಠಾನದ ವಿವಿಧ ಹಂತಗಳು:**

- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕೇಂದ್ರ ಕಚೇರಿಯಿಂದ ಪ್ರಚಲಿತ ವಿದ್ಯುನ್ಮಾನ ಪತ್ರಿಕೆಗಳಲ್ಲಿ ನಿಗಧಿತ ಕಾಲಮಿತಿಯೊಳಗೆ ಅರ್ಹ ಫಲಾನುಭವಿಗಳಿಂದ ಆನ್ಲೈನ್ ಮೂಲಕ ಅರ್ಜಿಗಳನ್ನು ಅರ್ಜಿಗಳನ್ನು ಆಹ್ವಾನಿಸಲಾಗುವುದು.

- ಅರ್ಹ ಫಲಾನುಭವಿಗಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಜಿ ಮತ್ತು ನಿಗಿದಿ ಪಡಿಸಿದ ದಾಖಲೆಗಳನ್ನು ಕಡ್ಡಾಯವಾಗಿ ಆನ್ಲೈನ್ ನಲ್ಲಿ ಸಲ್ಲಿಸತಕ್ಕದ್ದು,ಇಲ್ಲವಾದಲ್ಲಿ ಅರ್ಜಿಗಳನ್ನು ಆಯ್ಕೆ ಸಮಿತಿಗೆ ಮಂಡಿಸಲಾಗುವುದಿಲ್ಲ.
- ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು,ಸ್ವೀಕರಿಸಲಾದ ಅರ್ಹ ಅರ್ಜಿಗಳನ್ನು ಪರಿಶೀಲಿಸಿ ವೇಳಾ ಪಟ್ಟಿ ಪ್ರಕಾರ ಸಮಿತಿಯ ಮುಂದೆ ಮಂಡಿಸತಕ್ಕದ್ದು
- ಮಹಿಳೆಯರಿಗೆ ಆದ್ಯತೆ ನೀಡತಕ್ಕದ್ದು
- ಆಯ್ಕೆ ಸಮಿತಿಯಲ್ಲಿ ಆಯ್ಕೆಯಾದ ಫಲಾನುಭವಿಗಳ ಅರ್ಜಿಗಳನ್ನು ದಾಖಲೆಗಳೊಂದಿಗೆ ಜಿಲ್ಲಾ ವ್ಯವಸ್ಥಾಪಕರು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿನ ರಾಷ್ಟ್ರೀಕೃತ/ಷೆಡ್ಯೂಲ್/ಆರ್.ಬಿ.ಐ ನಿಂದ ಮಾನ್ಯತೆ ಪಡೆದ ವಿವಿಧ ಫೈನಾನ್ಸ್ ಸಂಸ್ಥೆಗಳು(finance corp companies co-operative bank societies)ಬ್ಯಾಂಕ್ ಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸತಕ್ಕದ್ದು.
- ಜಿಲ್ಲೆಗೆ ನಿಗದಿಪಡಿಸಿರುವ ಗುರಿಗೆ ಅನುಗುಣವಾಗಿ ಪ್ರಸ್ತಾವನೆಯನ್ನು ಬ್ಯಾಂಕಿನ ಸಾಲ ಮಂಜೂರಾತಿ ಪತ್ರದ ಜೊತೆಗೆ ಮತ್ತು ವಾಹನದ ದರ ಪಟ್ಟಿಯನ್ನು ಅಧಿಕೃತ ಡೀಲರುಗಳಿಂದ ಪಡೆದು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಕೇಂದ್ರ ಕಛೇರಿಯಿಂದ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಿಂದ ಆನ್‌ಲೈನ್ ಮೂಲಕ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಸಹಾಯಧನವನ್ನು ಸಂಬಂದಪಟ್ಟ ಜಿಲ್ಲೆಯ ಬ್ಯಾಂಕ್ parking accounts/sundry a/c ಗೆ ಕಳುಹಿಸಿಕೊಡುವುದು.
- ನಿಗಮದಿಂದ ಬಿಡುಗಡೆ ಮಾಡಲಾದ ಸಹಾಯಧನವನ್ನು ನಿಗದಿತ ಉದ್ದೇಶಕ್ಕೆ ವಿನಿಯೋಗಿಸಿರುವ ಕುರಿತು ಬ್ಯಾಂಕ್ ವ್ಯವಸ್ಥಾಪಕರಿಂದ ಸಂಬಂದ ಪಟ್ಟ ಜಿಲ್ಲಾ ವ್ಯವಸ್ಥಾಪಕರು ಸಹಾಯಧನ ವಿನಿಯೋಗ ಪ್ರಮಾಣ ಪತ್ರ ಪಡೆಯುವುದು.
- ಸಾಲವನ್ನು ಮಂಜೂರು ಮಾಡದ್ದಿದ್ದಲ್ಲಿ, ಸಕಾರಣಗಳೊಂದಿಗೆ ಸಹಾಯಧನ ಮೊತ್ತವನ್ನು ಕೇಂದ್ರ ಕಛೇರಿಗೆ ಹಿಂದಿರುಗಿಸಬೇಕು.

### 3. ಶ್ರಮಶಕ್ತಿ ಯೋಜನೆ:

ಈ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತ ವರ್ಗದ ಕುಲಕಸುಬುದಾರರಿಗೆ ತರಬೇತಿ ನೀಡಿ, ಅವರು ತಮ್ಮ ಕಲಾತ್ಮಕ ಮತ್ತು ತಾಂತ್ರಿಕ ಕೌಶಲ್ಯವನ್ನು ವೃದ್ಧಿಸಿಕೊಂಡು ಅದೇ ಕಸುಬನ್ನು ಮುಂದುವರೆಸಲು ಅಥವಾ ಸಣ್ಣ ವ್ಯಾಪಾರವನ್ನು ಪ್ರಾರಂಭಿಸಲು ಅಥವಾ ಅಭಿವೃದ್ಧಿಗೊಳಿಸುವ ಸಲುವಾಗಿ,ನಿಗಮದಿಂದ ಕಡಿಮೆ ಬಡ್ಡಿದರದಲ್ಲಿ ರೂ.50,000/- ಸಾಲಸೌಲಭ್ಯವನ್ನು ಕಲ್ಪಿಸಲಾಗುತ್ತದೆ. ಇದರಲ್ಲಿ ಶೇ.50 ರಷ್ಟು ಸಾಲವನ್ನು ಮತ್ತು ಶೇ.50 ರಷ್ಟು ಸಹಾಯಧನವಾಗಿರುತ್ತದೆ.

## ಮಾರ್ಗಸೂಚಿಗಳು:

1. ಅರ್ಜಿದಾರರು ರಾಜ್ಯದ ಮತೀಯ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರಬೇಕು
2. ಅರ್ಜಿದಾರರು ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
3. ಅರ್ಜಿದಾರರ ವಯೋಮಿತಿ 18 ರಿಂದ 55 ವರ್ಷಗಳು.
4. ಎಲ್ಲಾ ಮೂಲಗಳಿಂದ ಕೌಟುಂಬಿಕ ವಾರ್ಷಿಕ ಆದಾಯ ರೂ.6.00 ಲಕ್ಷ ದೊಳಗಿರಬೇಕು
5. ಅರ್ಜಿದಾರರ ಕುಟುಂಬದ ಯಾವುದೇ ಸದಸ್ಯರು ರಾಜ್ಯ/ಕೇಂದ್ರ ಸರ್ಕಾರದ ಉದ್ಯೋಗಿಯಾಗಿರಬಾರದು
6. ಅರ್ಜಿದಾರರು KMDC ಯಲ್ಲಿ ಸುಸ್ಥಿದಾರರಾಗಿರಬಾರದು.

## ದಾಖಲೆಗಳು:

1. ಆನ್ ಲೈನ್ ಅರ್ಜಿ
2. ಫಲಾನುಭವಿಯ ಇತ್ತೀಚಿನ 2 ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರ
3. ಜಾತಿ ಆದಾಯ ಪ್ರಮಾಣ ಪತ್ರ.
4. ಪಡಿತರ ಚೀಟಿ/ಮತದಾರರ ಚೀಟಿ/ಆಧಾರ್ ಕಾರ್ಡ್
5. ಯೋಜನಾ ವರದಿ

## ಆಯ್ಕೆ ಸಮಿತಿ:

1. ಆಯಾ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು-ಅಧ್ಯಕ್ಷರು
2. ನೋಡಲ್ ತಾಲ್ಲೂಕುಗಳಾಗಿ ಆಯ್ಕೆ ಮಾಡಿಕೊಂಡಿರುವ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು-ಸಹ ಅಧ್ಯಕ್ಷರು
3. ಸಂಬಂದಿಸಿದ ತಾಲ್ಲೂಕು ತಹಶಿಲ್ದಾರ್- ಸದಸ್ಯರು
4. ಕಾರ್ಯನಿರ್ವಹಣಾಧಿಕಾರಿ ತಾಲ್ಲೂಕು ಪಂಚಾಯತ್- ಸದಸ್ಯರು
5. ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್- ಸದಸ್ಯರು
6. ಜಂಟಿ ನಿರ್ದೇಶಕರು,ವಾಣಿಜ್ಯ ಮತ್ತು ಕೈಗಾರಿಕೆ- ಸದಸ್ಯರು
7. ಉಪ ನಿರ್ದೇಶಕರು,ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ- ಸದಸ್ಯರು
8. ಜಿಲ್ಲಾ ವ್ಯವಸ್ಥಾಪಕರು,ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ-ಸದಸ್ಯ ಕಾರ್ಯದರ್ಶಿ

**ಯೋಜನೆಯ ಅನುಷ್ಠಾನದ ವಿವಿಧ ಹಂತಗಳು:**

- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯಿಂದ ಪ್ರಚಲಿತ ವಿದ್ಯುನ್ಮಾನ ಪತ್ರಿಕೆಗಳಲ್ಲಿ ನಿಗದಿತ ಕಾಲಮಿತಿಯೊಳಗೆ ಅರ್ಹ ಫಲಾನುಭವಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗುವುದು.
- ಅರ್ಹ ಫಲಾನುಭವಿಗಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಜಿ ಮತ್ತು ನಿಗದಿಪಡಿಸಿದ ದಾಖಲೆಗಳನ್ನು ಕಡ್ಡಾಯವಾಗಿ ಆನ್ ಲೈನ್ ನಲ್ಲಿ ಸಲ್ಲಿಸತಕ್ಕದ್ದು,ಇಲ್ಲವಾದಲ್ಲಿ ಅರ್ಜಿಗಳನ್ನು ಆಯ್ಕೆ ಸಮಿತಿಗೆ ಮಂಡಿಸಲಾಗುವುದಿಲ್ಲ.
- ಸಂಬಂದಪಟ್ಟ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು,ಸ್ವೀಕರಿಸಲಾದ ಅರ್ಹ ಅರ್ಜಿಗಳನ್ನು ಪರಿಶೀಲಿಸಿ ವೇಳಾಪಟ್ಟಿ ಪ್ರಕಾರ ಆಯ್ಕೆ ಸಮಿತಿಯ ಮುಂದೆ ಮಂಡಿಸತಕ್ಕದ್ದು.
- ಮಹಿಳೆಯರಿಗೆ ಶೇ.33 % ನೀಡತಕ್ಕದ್ದು
- ಜಿಲ್ಲೆಗೆ ನಿಗದಿಪಡಿಸಿರುವ ಗುರಿಗೆ ಅನುಗುಣವಾಗಿ ಪ್ರಸ್ತಾವನೆಯನ್ನು ಕಡ್ಡಾಯವಾಗಿ ಆನ್ ಲೈನ್ ಮೂಲಕ ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲಿಸಿ ಸಹಾಯಧನವನ್ನು ಸಂಬಂದಪಟ್ಟ ಫಲಾನುಭವಿಯ ಬ್ಯಾಂಕ್ ಖಾತೆಗೆ ಕಳುಹಿಸಿಕೊಡುವುದು.
- ನಿಗಮದಿಂದ ಬಿಡುಗಡೆ ಮಾಡಲಾದ ಸಾಲ ಸಹಾಯಧನವನ್ನು ನಿಗಧಿತ ಉದ್ದೇಶಕ್ಕೆ ವಿನಿಯೋಗಿಸಿರುವ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ಸಹಾಯಧನ ವಿನಿಯೋಗ ಪ್ರಮಾಣ ಪತ್ರ ಪಡೆಯುವುದು.

**4. ಶ್ರಮಶಕ್ತಿ ( ವಿಶೇಷ ಮಹಿಳಾ ಯೋಜನೆ)**

ಅಲ್ಪಸಂಖ್ಯಾತ ಸಮುದಾಯದ ವಿಧವೆ/ವಿಚ್ಛೇದಿತ/ಂಅವಿವಾಹಿತ ಮಹಿಳೆಯರಿಗೆ ಆರ್ಥಿಕ ಸಬಲೀಕರಣಕ್ಕಾಗಿ ವಿಶೇಷ ಯೋಜನೆಯಾಗಿದೆ.ಯೋಜನೆಯಡಿ ರೂ.25,000 ಸಾಲ ಮತ್ತು ರೂ.25,000 ಸಹಾಯಧನ ಸೇರಿ ಕನಿಷ್ಠ ಒಟ್ಟು ರೂ.50,000/-ಸಾಲ ಮತ್ತು ಸಹಾಯಧನವನ್ನು ವಿವಿಧ ಆರ್ಥಿಕ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಒದಗಿಸಲಾಗುವುದು.ಪ್ರತಿ ಫಲಾನುಭವಿಗೆರೂ.50,000/-ಸಾಲ ಮತ್ತು ಸಹಾಯಧನ ಮೊತ್ತ ನಿಗದಿಪಡಿಸಲಾಗಿದ್ದು ಯಾವುದೇ ಕಾರಣಕ್ಕೂ ಸಾಲ ಮತ್ತು ಸಹಾಯಧನದ ಮೊತ್ತವನ್ನು ನಿಗದಿಪಡಿಸಿರುವ ಮೊತ್ತಕ್ಕಿಂತ ಕಡಿಮೆ ಮಾಡಬಾರದು.

**ಮಾರ್ಗಸೂಚಿಗಳು**:

1. ಅರ್ಜಿದಾರರು ರಾಜ್ಯದ ಮತೀಯ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರಬೇಕು
2. ಅರ್ಜಿದಾರರು ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

3. ಅರ್ಜಿದಾರರ ವಯೋಮಿತಿ 18 ರಿಂದ 55 ವರ್ಷಗಳು.(ಅವಿವಾಹಿತ ಮಹಿಳೆಯರು ಕನಿಷ್ಠ 40 ವರ್ಷ ಮೇಲ್ಪಟ್ಟಿರಬೇಕು)
4. ಎಲ್ಲಾ ಮೂಲಗಳಿಂದ ಕೌಟುಂಬಿಕ ವಾರ್ಷಿಕ ಆದಾಯ ರೂ.6.00 ಲಕ್ಷ ದೊಳಗಿರಬೇಕು
5. ಅರ್ಜಿದಾರರ ಕುಟುಂಬದ ಯಾವುದೇ ಸದಸ್ಯರು ರಾಜ್ಯ/ಕೇಂದ್ರ ಸರ್ಕಾರದ ಉದ್ಯೋಗಿಯಾಗಿರಬಾರದು
6. ಅರ್ಜಿದಾರರು KMDC ಯಲ್ಲಿ ಸುಸ್ತಿದಾರರಾಗಿರಬಾರದು.

**ದಾಖಲೆಗಳು:**

1. ಆನ್‌ಲೈನ್ ಅರ್ಜಿ
2. ಫಲಾನುಭವಿಯ ಇತ್ತೀಚಿನ 2 ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರ
3. ಜಾತಿ ಆದಾಯ ಪ್ರಮಾಣ ಪತ್ರ.
4. ಪಡಿತರ ಚೀಟಿ/ಮತದಾರರ ಚೀಟಿ/ಆಧಾರ್ ಕಾರ್ಡ್
5. ಯೋಜನಾ ವರದಿ

**ಆಯ್ಕೆ ಸಮಿತಿ:**

1. ಆಯಾ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು-ಅಧ್ಯಕ್ಷರು
2. ನೋಡಲ್ ತಾಲ್ಲೂಕುಗಳಾಗಿ ಆಯ್ಕೆ ಮಾಡಿಕೊಂಡಿರುವ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು-ಸಹ ಅಧ್ಯಕ್ಷರು
3. ಸಂಬಂದಿಸಿದ ತಾಲ್ಲೂಕು ತಹಶಿಲ್ದಾರ್- ಸದಸ್ಯರು
4. ಕಾರ್ಯನಿರ್ವಹಣಾಧಿಕಾರಿ ತಾಲ್ಲೂಕು ಪಂಚಾಯತ್- ಸದಸ್ಯರು
5. ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್- ಸದಸ್ಯರು
6. ಜಂಟಿ ನಿರ್ದೇಶಕರು,ವಾಣಿಜ್ಯ ಮತ್ತು ಕೈಗಾರಿಕೆ- ಸದಸ್ಯರು
7. ಉಪ ನಿರ್ದೇಶಕರು,ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ- ಸದಸ್ಯರು
8. ಜಿಲ್ಲಾ ವ್ಯವಸ್ಥಾಪಕರು,ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ-ಸದಸ್ಯ ಕಾರ್ಯದರ್ಶಿ

## ಯೋಜನೆಯ ಅನುಷ್ಠಾನದ ವಿವಿಧ ಹಂತಗಳು:

- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯಿಂದ ರಾಜ್ಯದ ಪ್ರಮುಖ ದಿನ ಪತ್ರಿಕೆಗಳಲ್ಲಿ ನಿಗಧಿತ ಕಾಲಮಿತಿಯೊಳಗೆ ಅರ್ಹ ಫಲಾನುಭವಿಗಳಿಂದ ಆನ್‌ಲೈನ್‌ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗುವುದು.
- ಫಲಾನುಭವಿಗಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಜಿ ಮತ್ತು ನಿಗದಿಪಡಿಸಿದ ದಾಖಲೆಗಳನ್ನು ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು,ಇಲ್ಲವಾದಲ್ಲಿ ಅರ್ಜಿಗಳನ್ನು ಆಯ್ಕೆ ಸಮಿತಿಗೆ ಮಂಡಿಸಲಾಗುವುದಿಲ್ಲ.
- ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು,ಸ್ವೀಕರಿಸಲಾದ ಅರ್ಹ ಅರ್ಜಿಗಳನ್ನು ಪರಿಶೀಲಿಸಿ ವೇಳಾ ಪಟ್ಟಿ ಪ್ರಕಾರ ಆಯ್ಕೆ ಸಮಿತಿಯ ಮುಂದೆ ಮಂಡಿಸತಕ್ಕದ್ದು.
- ಜಿಲ್ಲೆಗೆ ನಿಗದಿಪಡಿಸಿರುವ ಗುರಿಗೆ ಅನುಗುಣವಾಗಿ ಪ್ರಸ್ತಾವನೆಯನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಕೇಂದ್ರ ಕಛೇರಿಯು ಜಿಲ್ಲಾ ವ್ಯವಸ್ಥಾಪಕರ ಕಛೇರಿಯಿಂದ ಆನ್‌ಲೈನ್ ಮೂಲಕ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಸಂಬಂದಪಟ್ಟ ತರಬೇತಿ ಸಂಸ್ಥೆಗಳಿಂದ ತರಬೇತಿ ನೀಡಲು ಕ್ರಮ ವಹಿಸುವುದು.

## 5. ಗಂಗಾ ಕಲ್ಯಾಣ ಯೋಜನೆ:

ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ಕೊಳವೆಬಾವಿಯನ್ನು ಕೊರೆದು,ಪಂಪ್ ಮೋಟಾರ್ ಹಾಗೂ ವಿದ್ಯುದೀಕರಣ ಮಾಡಿ ನೀರನ್ನು ಒದಗಿಸಲಾಗುತ್ತದೆ. ಈ ಯೋಜನೆಯು ಸಂಪೂರ್ಣ ಸಹಾಯಧನ ಯೋಜನೆಯಾಗಿದೆ. ವೈಯಕ್ತಿಕ ಕೊಳವೆ ಬಾವಿ ಯೋಜನೆಗೆ ಸರ್ಕಾರವು ರೂ.4.00 ಲಕ್ಷಗಳನ್ನು 1.ಬೆಂಗಳೂರುಗ್ರಾಮಾಂತರ,2.ಕೋಲಾರ,3.ಚಿಕ್ಕಬಳ್ಳಾಪುರ,4.ರಾಮನಗರ,5.ತುಮಕೂರು. ಜಿಲ್ಲೆಗಳಿಗೆ ನಿಗದಿಪಡಿಸಿರುತ್ತದೆ ಮತ್ತು ಇತರೆ ಜಿಲ್ಲೆಗಳಿಗೆ ರೂ.3.00 ಲಕ್ಷಳನ್ನು ನಿಗದಿಪಡಿಸಿರುತ್ತದೆ.

**ಅರ್ಹತೆ:**

1. ಅರ್ಜಿದಾರರು ಸರ್ಕಾರಿ ಆದೇಶದಲ್ಲಿ ವಿವರಿಸಿದಂತೆ ಧಾರ್ಮಿಕ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದವರಾಗಿರಬೇಕು.
2. ಪ್ರತಿ ಫಲಾನುಭವಿಗೆ ಒಂದು ಎಕರೆ 20 ಗುಂಟೆ (1 ಎಕರೆ 50 ಸೆಂಟ್ಸ್) ಎಕರೆಯಿಂದ5 ಎಕರೆಯವರೆಗೆ ಖುಷ್ಕಿ ಜಮೀನಿರಬೇಕು, ಕೊಡಗು ,ದಕ್ಷಿಣ ಕನ್ನಡ,ಉಡುಪಿ,ಉತ್ತರ ಕನ್ನಡ,ಚಿಕ್ಕಮಗಳೂರು,ಶಿವಮೊಗ್ಗ ಮತ್ತು ಹಾಸನ ಇಂತಹ ಜಿಲ್ಲೆಗಳಲ್ಲಿ ಜಮೀನಿನ ಲಭ್ಯತೆ ಬಹಳ ಕಡಿಮೆ ಇರುವುದರಿಂದ ಕನಿಷ್ಠ 1 ಎಕರೆ ಜಮೀನನ್ನು ಹೊಂದಿರತಕ್ಕದ್ದು.
3. ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
4. ಅರ್ಜಿದಾರರು ಸಣ್ಣ /ಅತಿ ಸಣ್ಣ ಹಿಡುವಳಿದಾರ ರೈತರಾಗಿರಬೇಕು.
5. ಗ್ರಾಮೀಣ ಪ್ರದೇಶಗಳಲ್ಲಿ ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ರೂ. 6.00 ಲಕ್ಷಗಳನ್ನು ಮೀರಿರಬಾರದು.

**ದಾಖಲೆಗಳು:**

1. ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಜಾತಿ ಪ್ರಮಾಣ ಪತ್ರ
2. ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಆದಾಯ ಪ್ರಮಾಣ ಪತ್ರ
3. ಆಧಾರ್ ಕಾರ್ಡ್ ಪ್ರತಿ( ನಿವಾಸದ ಪುರಾವೆ)
4. ಇತ್ತೀಚಿನ ಆರ್.ಟಿ.ಸಿ ಪ್ರತಿ
5. ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಸಣ್ಣ /ಅತಿ ಸಣ್ಣ ಹಿಡುವಳಿದಾರ ಪ್ರಮಾಣ ಪತ್ರ
6. ಬ್ಯಾಂಕ್ ಪಾಸ್ ಬುಕ್ ಪ್ರತಿ
7. ಭೂ ಕಂದಾಯ ಪಾವತಿಸಿದ ರಸೀದಿ
8. ಸ್ವಯಂ ಘೋಷಣೆ ಪತ್ರ
9. ಖಾತರಿ ನೀಡುವವರ ಸ್ವಯಂ ಘೋಷಣೆ ಪತ್ರ

**ಆಯ್ಕೆ ಸಮಿತಿ:**

1. ಆಯಾ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು -ಅಧ್ಯಕ್ಷರು
2. ನೋಡಲ್ ತಾಲ್ಲೂಕುಗಳಾಗಿ ಆಯ್ಕೆ ಮಾಡಿಕೊಂಡಿರುವ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು-ಸಹ ಅಧ್ಯಕ್ಷರು
3. ಸಂಬಂದಿಸಿದ ತಾಲ್ಲೂಕು ತಹಶಿಲ್ದಾರ್- ಸದಸ್ಯರು
4. ಕಾರ್ಯನಿರ್ವಹಣಾಧಿಕಾರಿ ತಾಲ್ಲೂಕು ಪಂಚಾಯತ್- ಸದಸ್ಯರು
5. ಜಿಲ್ಲಾ ವ್ಯವಸ್ಥಾಪಕರು,ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ-ಸದಸ್ಯ ಕಾರ್ಯದರ್ಶಿ

## 6. ಸಮುದಾಯ ಆಧಾರಿತ ತರಬೇತಿ ಯೋಜನೆ:

ನಿಗಮದ ವತಿಯಿಂದ ಅಲ್ಪಸಂಖ್ಯಾತ ಸಮುದಾಯದ ನಿರುದ್ಯೋಗ ಹೊಂದಿರುವ ಯುವಕ/ಯುವತಿಯರಿಗೆ ಸ್ವಯಂ ಉದ್ಯೋಗ /ಕಛೇರಿ,ಕಂಪನಿ,ಕಾರ್ಖಾನೆಗಳಲ್ಲಿ ಉದ್ಯೋಗ ದೊರಕಿಸುವ ಸಲುವಾಗಿ ಈ ಕೆಳಗಿನ ತರಬೇತಿ ಯೋಜನೆಯನ್ನು ಹಮ್ಮಿಕೊಳ್ಳಲು ಪ್ರಸ್ತಾಪಿಸಲಾಗಿದೆ.

1. ಮಾನ್ಯತೆ ಪಡೆದ ಕೇಂದ್ರುಗಳೊಂದಿಗೆ ಬ್ಯೂಟಿ ಪಾರ್ಲರ್ ತರಬೇತಿ(ಪುರುಷರು ಮತ್ತು ಮಹಿಳೆಯರು) ಪ್ರಮಾಣಿಕರಣ ಕೋರ್ಸ್
   Beauty Parlour Training (Men & Women) Certification course with recognized centres
2. ಹೆವಿ ಅರ್ಥ್ ಮೂವರ್ ತರಬೇತಿ(ಜೆ.ಸಿ.ಬಿ,ಕ್ರೇನ್,ಪ್ರೋಕ್ ಲೇನ್ ಸೇರಿದಂತೆ ಭಾರಿ ವಾಹನ ಚಾಲನ ತರಬೇತಿ.
   Heavy Earth Mover Operation Training (JCB, Crane, Poklane,Heavy vehicle Operation)
3. ಶಾರ್ಟ್ ಹ್ಯಾಂಡ್ ಟ್ರೈನಿಂಗ್
   Short Hand Training
4. ಭದ್ರುತಾ ಸೇವೆಗಳ ತರಬೇತಿ
   Security Services Training
5. ಕಛೇರಿ ಕಾರ್ಯ ನಿರ್ವಹಣೆ ತರಬೇತಿ
   Office Self Skill Training

**ಸಲ್ಲಿಸಬೇಕಾದ ದಾಖಲೆಗಳು :**

1. ಆನ್‌ಲೈನ್ ಅರ್ಜಿ
2. ಫಲಾನುಭವಿಯ ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ
3. ಜಾತಿ ಆದಾಯ ಪ್ರಮಾಣ ಪತ್ರ.
4. ಪಡಿತರ ಚೀಟಿ/ಮತದಾರರ ಚೀಟಿ/ಆಧಾರ್ ಕಾರ್ಡ್
5. ವಿಧ್ಯಾರ್ಥಿಯ SSLC /10 ನೇ ತರಗತಿಯ ಅಂಕಪಟ್ಟಿ/ವರ್ಗಾವಣೆ ಪ್ರಮಾಣ ಪತ್ರ/ವಿದ್ಯಾರ್ಥಿಯ ಡಿಪ್ಲೊಮ/ಪಿ.ಯು.ಸಿ ಅಂಕ ಪಟ್ಟಿ
6. ಅರ್ಜಿದಾರರ ವೈಒಮಿತಿ 18 ರಿಂದ 35 ವರ್ಷಗಳು
7. ಆಯ್ಕೆಯಾದ ಅರ್ಜಿದಾರರು ಕಡ್ಡಾಯವಾಗಿ ತರಬೇತಿಯನ್ನು ಪೂರ್ಣ ಗೊಳಿಸಬೇಕು
8. ಅಭ್ಯರ್ಥಿಯು ಬೇರೆ ಯಾವುದೇ ಸರ್ಕಾರದ ವತಿಯಿಂದ ವೃತ್ತಿಪರ ತರಬೇತಿಯನ್ನು ಪಡೆದಿರಬಾರದು
9. ತರಬೇತಿಯನ್ನು ಸರ್ಕಾರಿ/ಅರೆ ಸರ್ಕಾರಿ/ಸಾರ್ವಜನಿಕ ವಲಯ ಮತ್ತು ಮಾನ್ಯತೆ ಪಡೆದ ಖಾಸಗಿ ಸಂಸ್ಥೆಗಳಿಂದ ನೀಡಲಾಗುವುದು.

## 7. ವಿದೇಶಿ ವಿಧ್ಯಾಭ್ಯಾಸ ಸಾಲ :

ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ವಿದೇಶಗಳಲ್ಲಿ ವ್ಯಾಸಂಗ ಮಾಡಲು ಆರ್ಥಿಕ/ಸಾಲ ನೆರವು ನೀಡುವುದು ಈ ಯೋಜನೆಯ ಉದ್ದೇಶವಾಗಿದೆ.ವಿದೇಶದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ವ್ಯಾಸಂಗ ಮಾಡಲು ಅನುಕೂಲವಾಗುವಂತೆ ಶೂನ್ಯ ಬಡ್ಡಿದರದಲ್ಲಿ ಪ್ರತಿ ವಿದ್ಯಾರ್ಥಿಗೆ ರೂ.20.00 ಲಕ್ಷಗಳು ಸಾಲ ಸೌಲಭ್ಯ ಒದಗಿಸಲಾಗುವುದು.

<u>ಅರ್ಹತೆಗಳು:</u>

1. ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
2. ವಿದ್ಯಾರ್ಥಿಯು ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದವರಾಗಿರಬೇಕು
3. ವಿದ್ಯಾರ್ಥಿಯು ಹಿಂದಿನ ವರ್ಷದಲ್ಲಿ ಕನಿಷ್ಠ 60 % ಅಂಕವನ್ನು ಪಡೆದಿರಬೇಕು.
4. ವಿದೇಶ ವಿಶ್ವವಿದ್ಯಾಲಯದಿಂದ ಆಫರ್ ಲೆಟರ್ ಪಡೆದಿರಬೇಕು.
5. ನಿಗಮಕ್ಕೆ ಆಸ್ತಿಯ(ಕಟ್ಟಡ/ಜಮೀನು)ಅಡಮಾನದ ಮೇಲೆ ಮಾತ್ರ ಸಾಲ ಒದಗಿಸಲಾಗುವುದು.ಆಸ್ತಿಯ ಮೌಲ್ಯವು ಸಾಲದ ಮೊತ್ತಕ್ಕಿಂತ ಕಡಿಮೆ ಇರಬಾರದು
6. ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿ ವಿದೇಶ ವ್ಯಾಸಂಗಕ್ಕಾಗಿ ವಿಧ್ಯಾರ್ಥಿ ವೇತನ ಪಡೆಯದೆ ಇರುವಂತಹ ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಸಾಲಕ್ಕಾಗಿ ಪರಿಗಣಿಸುವುದು.

## <u>8.ವೃತ್ತಿ ಪ್ರೋತ್ಸಾಹ ಯೋಜನೆ</u>

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಈ ಹಿಂದೆ ಅನುಷ್ಠಾನಗೊಳ್ಳುತ್ತಿದ್ದ ವೃತ್ತಿ ಪ್ರೋತ್ಸಾಹ ಮತ್ತು ಸ್ವಯಂ ಉದ್ಯೋಗ ಯೋಜನೆಗಳೆರಡನ್ನು ವಿಲೀನಗೊಳಿಸಿ " ವೃತ್ತಿ ಪ್ರೋತ್ಸಾಹ ಯೋಜನೆ" ಎಂದು 2020-21 ನೇ ಸಾಲಿಗೆ ಅನ್ವಯವಾಗುವಂತೆ ಬ್ಯಾಂಕ್ ಸಾಲದ ಬದಲಾಗಿ ಕೆ.ಎಂ.ಡಿ.ಸಿ ನಿಗಮದ ವತಿಯಿಂದಲೇ ಒಟ್ಟು ಸಾಲದ ಮೊತ್ತ ರೂ.1.00 ಲಕ್ಷ ( ಒಂದು ಲಕ್ಷ ರೂಪಾಯಿಗಳು) ಅದರಲ್ಲಿ ಶೇ.50ರಷ್ಟು ಸಾಲ,ಶೇ.50ರಷ್ಟು ಸಹಾಯಧನ ದೊಂದಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಷ್ಠಾನಗೊಳಿಸಲು

**ಷರತ್ತುಗಳು:**

1. ಈ ಸಾಲ ಸೌಲಭ್ಯವನ್ನು ಮತೀಯ ಅಲ್ಪಸಂಖ್ಯಾತರ ಸಮುದಾಯದ ಅರ್ಹ ಫಲಾನುಭವಿಗಳಿಗೆ ನೀಡಲಾಗುವುದು.
2. ಅರ್ಜಿದಾರರು ರಾಜ್ಯದ ಖಾಯಂ ನಿವಾಸಿಗಳಾಗಿರತಕ್ಕದ್ದು.
3. ಅರ್ಜಿದಾರರ ವಯೋಮಿತಿ 18 ರಿಂದ 55 ವರ್ಷಗಳು
4. ಮತೀಯ ಅಲ್ಪಸಂಖ್ಯಾತರ ಸಮುದಾಯದ ಮಹಿಳೆಯರಿಗೆ ಆದ್ಯತೆ ನೀಡುವುದು.
5. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ಮಿತಿಯ ರೂ.6.00 ಲಕ್ಷ ಮೀರಿರಬಾರದು.
6. ಅರ್ಜಿದಾರರ ಕುಟುಂಬದ ಯಾವುದೇ ಸದಸ್ಯರು ರಾಜ್ಯ/ಕೇಂದ್ರ ಸರ್ಕಾರದ ಸೇವೆಯಲ್ಲಿರಬಾರದ್ದು.
7. ಈ ಯೋಜನೆಗೆ ಅರ್ಜಿ ಸಲ್ಲಿಸುವ ಯಾವುದೇ ಅರ್ಜಿದಾರರು ಅಥವಾ ಅವರ ಕುಟುಂಬದ ಸದಸ್ಯರು ಈ ಹಿಂದೆ ನಿಗಮದಿಂದ ಯಾವುದೇ ಸಾಲ ಸೌಲಭ್ಯ ಪಡೆದಿರಬಾರದು.
8. ಈ ಹಿಂದಿನ ಸ್ವಯಂ ಉದ್ಯೋಗ ಮತ್ತು ವೃತ್ತಿ ಪ್ರೋತ್ಸಾಹ ಯೋಜನೆಯಲ್ಲಿ ಸೂಚಿಸಲಾಗಿರುವ ಎಲ್ಲಾ ಚಟುವಟಿಕೆಗಳು ಉದ್ದೇಶಿತ ಯೋಜನೆಗೆ ಅನ್ವಯವಾಗತಕ್ಕದ್ದು
9. ಈ ಯೋಜನೆಯ ಒಟ್ಟು ಸಾಲದ ಮೊತ್ತ ರೂ.1.00 ಲಕ್ಷ ಇದರಲ್ಲಿ ಶೇ.50 ರಷ್ಟು ಸಾಲ ಶೇ.50 ರಷ್ಟು ಸಹಾಯ ಧನವಾಗಿರುತ್ತದೆ.
10. ಸದರಿ ಯೋಜನೆಯ ಸಾಲ ಮತ್ತು ಸಹಾಯಧನವನ್ನು ಕೆ.ಎಂ.ಡಿ.ಸಿ ನಿಗಮದ ವತಿಯಿಂದಲೇ ಬಿಡುಗಡೆಗೊಳಿಸುವುದು.
11. ರಾಜ್ಯದ ಎಲ್ಲಾ ಜಿಲ್ಲೆಗಳ ಫಲಾನುಭವಿಗಳಿಗೂ ಪ್ರಾತಿನಿಧ್ಯ ಒದಗಿಸುವ ದೃಷ್ಟಿಯಿಂದ ಜಿಲ್ಲಾ ಮತ್ತು ತಾಲ್ಲೂಕುವಾರು ಭೌತಿಕ ಗುರಿಯನ್ನು ನಿಗದಿಪಡಿಸಲಾಗುವುದು.

**ದಾಖಲೆಗಳು:**

1.ಆನ್‌ಲೈನ್ ಅರ್ಜಿ
2. ಫಲಾನುಭವಿಯ ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ
3. ಜಾತಿ ,ಆದಾಯ ಪ್ರಮಾಣ ಪತ್ರ
4. ಆಧಾರ್ ಕಾರ್ಡ್ ಪ್ರತಿ
5. ಯೋಜನಾ ವರದಿ.

**ಆಯ್ಕೆ ಸಮಿತಿ :**

1. ಅಧ್ಯಕ್ಷರು ಆಯಾ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು
2. ನೋಡಲ್ ತಾಲ್ಲೂಕುಗಳಾಗಿ ಆಯ್ಕೆ ಮಾಡಿಕೊಂಡಿರುವ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು-ಸಹ ನಿರ್ದೇಶಕರು
3. ಸದಸ್ಯರು – ಸಂಬಂದಪಟ್ಟ ಜಿಲ್ಲೆಯಲ್ಲಿನ ತಾಲ್ಲೂಕಿನ ತಹಸಿಲ್ದಾರರು
4. ಸದಸ್ಯರು- ಸಂಬಂದಪಟ್ಟ ಜಿಲ್ಲೆಯ ಉಪ ನಿರ್ದೇಶಕರು,ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
5. ಸದಸ್ಯರು- ಸಂಬಂದಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು,ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
6. ಸದಸ್ಯರು ಕಾರ್ಯದರ್ಶಿಗಳು -ಸಂಬಂದಪಟ್ಟ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು,ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ

**ಯೋಜನೆಯ ಅನುಷ್ಠಾನದ ವಿವಿಧ ಹಂತಗಳು:**

- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯಿಂದ ಪ್ರಚಲಿತ ವಿದ್ಯುನ್ಮಾನ ಪತ್ರಿಕೆಗಳಲ್ಲಿ ನಿಗದಿತ ಕಾಲ ಮಿತಿಯೊಳಗೆ ಅರ್ಹ ಫಲಾನುಭವಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗುವುದು.
- ಅರ್ಹ ಫಲಾನುಭವಿಗಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಜಿ ಮತ್ತು ನಿಗದಿಪಡಿಸಿದ ದಾಖಲೆಗಳನ್ನು ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು,ಇಲ್ಲವಾದಲ್ಲಿ ಅರ್ಜಿಗಳನ್ನು ಆಯ್ಕೆ ಸಮಿತಿಗೆ ಮಂಡಿಸಲಾಗುವುದಿಲ್ಲ.
- ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು,ಸ್ವೀಕರಿಸಲಾದ ಅರ್ಹ ಅರ್ಜಿಗಳನ್ನು ಪರಿಶೀಲಿಸಿ ವೇಳಾ ಪಟ್ಟಿ ಪ್ರಕಾರ ಆಯ್ಕೆ ಸಮಿತಿಯ ಮುಂದೆ ಮಂಡಿಸತಕ್ಕದ್ದು.
- ಮಹಿಳೆಯರಿಗೆ ಶೇ.33 % ಮೀಸಲಾತಿ ನೀಡತಕ್ಕದ್ದು.
- ಆಯ್ಕೆ ಸಮಿತಿಯಲ್ಲಿ ಆಯ್ಕೆಯಾದ ಫಲಾನುಭವಿಗಳ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಕೇಂದ್ರ ಕಛೇರಿಯಿಂದ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಿಂದ ಆನ್‌ಲೈನ್ ಮೂಲಕ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಸಾಲ ಮತ್ತು ಸಹಾಯಧನವನ್ನು ಸಂಬಂದಪಟ್ಟ ಫಲಾನುಭವಿಗಳಿಗೆ ಡಿ.ಬಿ.ಟಿ ಮುಖಾಂತರ ಹಣ ಪಾವತಿಸಲಾಗುವುದು.
- ಸಾಲವನ್ನು ಮಂಜೂರು ಮಾಡದಿದ್ದಲ್ಲಿ ಸಕಾರಣಗಳೊಂದಿಗೆ ಸಹಾಯಧನ ಮೊತ್ತವನ್ನು ಕೇಂದ್ರ ಕಚೇರಿಗೆ ಹಿಂದಿರುಗಿಸಬೇಕು

**Protection of Waqf Properties**
**HEAD OF ACCOUNT: 2225-04-102-0-03 (059)**

**LALC 667**

| District | Name of the Taluk | Number of Waqf Institutions | Sanctioned Amount ( In Lakhs) |
|---|---|---|---|
| Vijaypur | Bableshwar | 16 | 80.00 |
| | Tikota | 9 | 45.00 |
| | Vijaypur | 4 | 50.00 |
| | TOTAL | 29 | 175.00 |

Chief Executive Officer
Karnataka State Board of Auqaf